# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

| ಸಂಪುಟ –೧೫೬<br>Volume - 156 | ಬೆಂಗಳೂರು, ಗುರುವಾರ, ೧೮, ನವೆಂಬರ್, ೨೦೨೧ (ಕಾರ್ತಿಕ, ೨೭, ಶಕವರ್ಷ, ೧೯೪೩)<br>BENGALURU, THURSDAY, 18, NOVEMBER, 2021 (KARTHIKA , 27, SHAKAVARSHA, 1943) | ಸಂಚಿಕೆ ೧೮೩<br>Issue 183 |
|---|---|---|

## ಭಾಗ ೧

### ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

**ಕರ್ನಾಟಕ ಸರ್ಕಾರದ ನಡವಳಿಗಳು**
**(ಜಲಸಂಪನ್ಮೂಲ ಸಚಿವಾಲಯ)**

ವಿಷಯ : ಜಲಸಂಪನ್ಮೂಲ ಇಲಾಖೆಯಲ್ಲಿ ನಿಯೋಜನೆ / ಒಪ್ಪಂದದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಸಾರ್ವಜನಿಕ ವಲಯದ ಸಂಸ್ಥೆಗಳ ಅಧಿಕಾರಿಗಳ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯ ಸೇವೆಗಳಲ್ಲಿ ವಿಲೀನಗೊಳ್ಳಲು ಆನ್ ಲೈನ್‌ನಲ್ಲಿ ಸಲ್ಲಿಸಿರುವ ಅಭಿಮತದ ಬಗ್ಗೆ - ಆದೇಶ.

ಓದಲಾಗಿದೆ :

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 293 ಸೇಸಕಿ 2005, ದಿನಾಂಕ: 03-12-2014
2. ಸರ್ಕಾರದ ಆದೇಶ ಸಂಖ್ಯೆ: ಲೋಇ 216 ಸೇಸಕಿ 2018, ದಿನಾಂಕ: 31-10-2019
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 6 ಸೇಎಸು 2015, ದಿನಾಂಕ: 25-11-2019 ಮತ್ತು ಸೇರ್ಪಡೆ ದಿನಾಂಕ: 05-12-2019
4. ಸರ್ಕಾರದ ಅಧಿಸೂಚನೆ ಸಂಖ್ಯೆ: ಜಸಂಇ 6 ಸೇಎಸು 2015, ದಿನಾಂಕ: 13-08-2020
5. ಸರ್ಕಾರದ ಆದೇಶ ಸಂಖ್ಯೆ: ಜಸಂಇ 6 ಸೇಎಸು 2015 (ಭಾಗ-5), ದಿನಾಂಕ: 30-01-2021.
6. ಸರ್ಕಾರದ ಆದೇಶ ಸಂಖ್ಯೆ: ಜಸಂಇ 6 ಸೇಎಸು 2015 (ಭಾಗ-6), ದಿನಾಂಕ: 02-03-2021
7. ಸರ್ಕಾರದ ಆದೇಶ ಸಂಖ್ಯೆ: ಜಸಂಇ 6 ಸೇಎಸು 2015 (ಭಾಗ-7), ದಿನಾಂಕ: 16-03-2021.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 179 ಸೇನೆನಿ 2020, ದಿನಾಂಕ: 06-07-2021.

********

**ಪ್ರಸ್ತಾವನೆ:**

(1) 2002ನೇ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆಯನ್ನು ಎಲ್ಲ ಹಂತಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ಬೇರ್ಪಡಿಸಿ ಆದೇಶ ಹೊರಡಿಸಿದ್ದಾಗ್ಯೂ ಸಹ ಜಲಸಂಪನ್ಮೂಲ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳ ಅಧಿಕಾರಿ / ನೌಕರರು ಬೇರ್ಪಡಿಕೆಯಾಗಿರುವುದಿಲ್ಲ. ಈ ಎಲ್ಲಾ ಅಧಿಕಾರಿ / ನೌಕರರ ಸೇವಾ ಜ್ಯೇಷ್ಠತೆ, ಮುಂಬಡ್ತಿ, ವರ್ಗಾವಣೆ ಮುಂತಾದ ಎಲ್ಲಾ ಸೇವಾ ವಿಷಯಗಳನ್ನು ಲೋಕೋಪಯೋಗಿ ಇಲಾಖೆಯೇ ನಿರ್ವಹಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮತ್ತು ಜಲಸಂಪನ್ಮೂಲ ಇಲಾಖೆಗಳಿಗೆ ನಿಯೋಜನೆ ಮೂಲಕ ನೇಮಕ ಮಾಡುತ್ತಿತ್ತು.

(2) ಮೇಲೆ (1) ರಲ್ಲಿ ಓದಲಾದ ದಿನಾಂಕ: 03-12-2014ರ ಅಧಿಸೂಚನೆಯ ಮುಖಾಂತರ ಜಲಸಂಪನ್ಮೂಲ ಇಲಾಖೆಗೆ ಪ್ರತ್ಯೇಕ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಜಾರಿಗೆ ತರಲಾಗಿದ್ದು, ಸದರಿ ನಿಯಮಗಳ ನಿಯಮ 2 ರಲ್ಲಿ ಇತರೆ ಇಲಾಖೆಗಳ ಅಧಿಕಾರಿ / ನೌಕರರ ಸೇವೆಯನ್ನು ಶಾಶ್ವತವಾಗಿ ವಿಲೀನಗೊಳಿಸಲು ಈ ಕೆಳಕಂಡಂತೆ ಅವಕಾಶ ಕಲ್ಪಿಸಲಾಗಿರುತ್ತದೆ:

*Within a period of 45 days from the date of commencement of the Karnataka Water Resources Service (Recruitment) Rules, 2014 the persons who are working against the various posts in the Water Resources Department and also those appointed in PWD but interested in getting absorbed in Water Resources Department may exercise irrevocable option for absorbing in the said department. Person who have expressed this willingness may be absorbed in the Water Resources Department services and on absorption, their inter-se seniority shall be determined with reference to their Parent Department in accordance with Karnataka Civil Service (Seniority) Rules, 1957.*

(3) ಮೇಲೆ (2) ರಲ್ಲಿ ಓದಲಾದ ದಿನಾಂಕ: 31-10-2019 ರ ಸರ್ಕಾರದ ಆದೇಶದಲ್ಲಿ ಜಲಸಂಪನ್ಮೂಲ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆ ಈ ಮೂರು ಇಲಾಖೆಗಳ ನಡುವಿನ ಅಧಿಕಾರಿ / ನೌಕರರುಗಳನ್ನು ಹಂಚಿಕೆ ಮಾಡುವ ಬಗ್ಗೆ ಸೂಕ್ತ ಶಿಫಾರಸ್ಸು ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಕಾನೂನು ಇಲಾಖೆ, ಸಂಸದೀಯ ವ್ಯವಹಾರಗಳ ಇಲಾಖೆ, ಆರ್ಥಿಕ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಮುಂತಾದ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಸರ್ಕಾರದ ಪ್ರಧಾನ ಕಾರ್ಯದರ್ಶಿ / ಸರ್ಕಾರದ ಕಾರ್ಯದರ್ಶಿ ಹಾಗೂ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳನ್ನೊಳಗೊಂಡ ತಜ್ಞರ ಸಮಿತಿಯನ್ನು ರಚಿಸಲಾಗಿರುತ್ತದೆ.

(4) ಜಲಸಂಪನ್ಮೂಲ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ನಿಯಮ 2 ರಲ್ಲಿ ಕಲ್ಪಿಸಲಾದ ಅವಕಾಶದಂತೆ ಮೇಲೆ(3) ಓದಲಾದ ದಿನಾಂಕ: 25-11-2019 ಹಾಗೂ ದಿನಾಂಕ: 05-12-2019 ರ ಸರ್ಕಾರದ ಆದೇಶ / ಅಧಿಸೂಚನೆ / ಸೇರ್ಪಡೆ ಅಧಿಸೂಚನೆಯಲ್ಲಿ ದಿನಾಂಕ: 31.12.2003ರ ಒಳಗೆ ನೇಮಕಗೊಂಡು ಜಲಸಂಪನ್ಮೂಲ ಇಲಾಖೆಯಲ್ಲಿ ನಿಯೋಜನೆ / ವರ್ಗಾವಣೆ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರಿ / ನೌಕರರ ಸೇವೆಯನ್ನು ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ನೇಮಿಸಿಕೊಳ್ಳಲು ಆನ್‌ಲೈನ್ ಮುಖಾಂತರ ಅವಕಾಶ ಕಲ್ಪಿಸಲಾಗಿತ್ತು.

(5) ಮೇಲೆ ತಿಳಿಸಿದ ಅವಕಾಶದನ್ವಯ ಜಲಸಂಪನ್ಮೂಲ ಇಲಾಖೆಯಲ್ಲಿ ವಿಲೀನಗೊಳ್ಳಲು ಆನ್‌ಲೈನ್‌ನಲ್ಲಿ ಅಭಿಮತವನ್ನು ಸಲ್ಲಿಸಿದ ಎಲ್ಲಾ ಅಧಿಕಾರಿ / ನೌಕರರುಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಪರಿಶೀಲಿಸದೆ, ಯಥಾವತ್ತಾಗಿ ಅಭಿಮತ ಸಲ್ಲಿಸಿದವರ ತಾತ್ಕಾಲಿಕ ಪಟ್ಟಿಯನ್ನಷ್ಟೇ ಮೇಲೆ

(4) ರಲ್ಲಿ ಓದಲಾದ ದಿನಾಂಕ: 13-08-2020ರ ಅಧಿಸೂಚನೆಯಲ್ಲಿ ಪ್ರಕಟಿಸಿ ಸಲಹೆ / ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಇದನ್ನು ಜಲಸಂಪನ್ಮೂಲ ಇಲಾಖೆಯ ಅಂತರ್ಜಾಲ ತಾಣದಲ್ಲಿಯೂ ಸಹ ಪ್ರಕಟಿಸಲಾಗಿತ್ತು.

(6) ದಿನಾಂಕ: 31-10-2019ರ ಆದೇಶದನ್ವಯ ನೇಮಕಗೊಂಡ ತಜ್ಞರ ಸಮಿತಿಯು ವಿವಿಧ ದಿನಾಂಕಗಳಂದು ಸಭೆ ಸೇರಿ, ಅಧಿಕಾರಿ / ನೌಕರರ ಬೇರ್ಪಡಿಸುವಿಕೆಯ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಜಲಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳ ಹುದ್ದೆಗಳನ್ನು ಪರಿಗಣಿಸಿ ಲೋಕೋಪಯೋಗಿ ಇಲಾಖೆಯೇ ನೇಮಕಾತಿ ಹಾಗೂ ಪದೋನ್ನತಿ ನೀಡಿ ಅವರ ಎಲ್ಲಾ ಸೇವಾ ವಿಷಯಗಳನ್ನು ಆ ಇಲಾಖೆಯೇ ನಿರ್ವಹಿಸುತ್ತಿದ್ದುದರಿಂದ ಸದರಿ ಅಧಿಕಾರಿ / ನೌಕರರುಗಳ ಬೇರ್ಪಡಿಕೆಯು ಈ ಮೂರು ಇಲಾಖೆಗಳಿಗೆ ಮಾತ್ರ ಸಂಬಂಧಿಸಿರುವುದರ ಹಿನ್ನೆಲೆಯಲ್ಲಿ **"ಸಿಬ್ಬಂದಿಗಳ ಬೇರ್ಪಡಿಕೆಯು ಲೋಕೋಪಯೋಗಿ ಇಲಾಖೆ, ಜಲಸಂಪನ್ಮೂಲ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗಳಿಗೆ ಮಾತ್ರ ಸಂಬಂಧಿಸಿರುವುದರಿಂದ ಈ ಇಲಾಖೆಯ ನೌಕರರುಗಳನ್ನು ಮಾತ್ರ ಶಾಶ್ವತ ವಿಲೀನಕ್ಕೆ ಪರಿಗಣಿಸುವುದು. ಉಳಿದಂತೆ ಇತರೆ ಇಲಾಖೆಗಳ ನೌಕರರುಗಳು ಸಲ್ಲಿಸಿರುವ ಅಭಿಮತವನ್ನು ಶಾಶ್ವತ ವಿಲೀನಾತಿಗೆ ಪರಿಗಣಿಸತಕ್ಕದ್ದಲ್ಲ......"** ಎಂದು ದಿನಾಂಕ: 04-09-2020 ರಂದು ಜರುಗಿದ ತಜ್ಞರ ಸಮಿತಿ ಸಭೆಯಲ್ಲಿ ನಿರ್ಧರಿಸಲಾಗಿರುತ್ತದೆ.

(7) ಜಲಸಂಪನ್ಮೂಲ ಇಲಾಖೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ಅಭಿಮತ ವ್ಯಕ್ತಪಡಿಸಿದ್ದ ಮೇಲೆ (5) ರಲ್ಲಿ ಓದಲಾದ ದಿನಾಂಕ: 13-08-2020ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದ ತಾತ್ಕಾಲಿಕ ಪಟ್ಟಿಯಲ್ಲಿರುವ ಹಾಗೂ ಲೋಕೋಪಯೋಗಿ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ವತಿಯಿಂದ ಅಭಿಮತ ಸಲ್ಲಿಸಲು ಕಲ್ಪಿಸಲಾದ ಅವಕಾಶದನ್ವಯ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನ ಹೊಂದಲು ಅಭಿಮತ ಸಲ್ಲಿಸಿದ್ದ ಅಧಿಕಾರಿ / ನೌಕರರುಗಳ ಸೇವಾ ವಿವರಗಳನ್ನು ಪರಿಶೀಲನೆಗೆ ಒಳಪಡಿಸಿ, ಜಲಸಂಪನ್ಮೂಲ ಇಲಾಖೆಯ ಅಧಿಸೂಚನೆಯನ್ವಯ ದಿನಾಂಕ: 31-12-2003ರೊಳಗೆ ಹಾಗೂ ಬ್ಯಾಕ್‌ಲಾಗ್ ಇಂಜಿನಿಯರ್‌ಗಳಿಗೆ ಸಂಬಂಧಿಸಿದಂತೆ ದಿನಾಂಕ: 31-01-2004ರೊಳಗೆ ನೇಮಕಗೊಂಡಿದ್ದ ಅರ್ಹ ಅಧಿಕಾರಿ / ನೌಕರರುಗಳ ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಗೆ ಕಳುಹಿಸಿ, ಇವರುಗಳ ಸೇವೆಯನ್ನು ಜಲಸಂಪನ್ಮೂಲ ಇಲಾಖೆಗೆ ಶಾಶ್ವತವಾಗಿ ವರ್ಗಾವಣೆಗೊಳಿಸಲು ಕೋರಲಾಗಿತ್ತು. ಸದರಿ ಕೋರಿಕೆಯನ್ವಯ ಲೋಕೋಪಯೋಗಿ ಇಲಾಖೆಯು ಶಾಶ್ವತವಾಗಿ ವರ್ಗಾವಣೆಗೊಳಿಸಲಾಗಿದ್ದ ಅರ್ಹ ಅಧಿಕಾರಿ/ನೌಕರರುಗಳ ಸೇವೆಯನ್ನು ಮೇಲೆ (5), (6) ಮತ್ತು (7) ರಲ್ಲಿ ಓದಲಾದ ಕ್ರಮವಾಗಿ ದಿನಾಂಕ: 30-01-2021, ದಿನಾಂಕ: 02-03-2021 ಮತ್ತು 16-03-2021ರ ಸರ್ಕಾರದ ಆದೇಶಗಳಲ್ಲಿ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನಗೊಳಿಸಲಾಗಿದೆ.

(8) ಮೇಲೆ (5) ರಲ್ಲಿ ಓದಲಾದ ದಿನಾಂಕ: 13-08-2020ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದ ಕರಡು ಪಟ್ಟಿಯಲ್ಲಿರುವ ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನ ಹೊಂದಲು ಅಭಿಮತ ಸಲ್ಲಿಸಿದ ಅಭಿಯಂತರರುಗಳ ಪೈಕಿ ಈ ಕೆಳಕಂಡ ಅಭಿಯಂತರರುಗಳು ಸಾರ್ವಜನಿಕ ವಲಯ ಸಂಸ್ಥೆಗಳಿಂದ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಅಧಿಕಾರಿಗಳಾಗಿರುತ್ತಾರೆ:

| ಕ್ರ ಸಂ | ಅಧಿಕಾರಿಯ ಹೆಸರು ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಮಾತೃ ಸಂಸ್ಥೆ |
|---|---|---|
| **ಕಾರ್ಯಪಾಲಕ ಅಭಿಯಂತರರು** | | |
| 01 | ಶ್ರೀ ಹೆಚ್. ಟಾಟಾ ಶಿವನ್<br>(ಅಧಿಸೂಚನೆ ಸಂಖ್ಯೆ: ಜಸಂಇ 13 ಸೇಎಸು 2021, ದಿನಾಂಕ: 22-09-2021ರಲ್ಲಿ ಇವರ ಸೇವೆಯನ್ನು ಅವರ ಮಾತೃ ಸಂಸ್ಥೆಗೆ ಹಿಂದಿರುಗಿಸಲಾಗಿದೆ) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು.<br>(ಆರ್ಥಿಕ ಇಲಾಖೆ) |
| 02 | ಶ್ರೀ ಆರ್. ಸುರೇಶ್<br>(ಅಧಿಸೂಚನೆ ಸಂಖ್ಯೆ: ಜಸಂಇ 50 ಸೇಎಸು 2019, ದಿನಾಂಕ: 07-03-2019ರಲ್ಲಿ ಇವರ ಸೇವೆಯನ್ನು ಅವರ ಮಾತೃ ಸಂಸ್ಥೆಗೆ ಹಿಂದಿರುಗಿಸಲಾಗಿದೆ) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು.<br>(ಆರ್ಥಿಕ ಇಲಾಖೆ) |
| 03 | ಶ್ರೀ. ಸಂಗಮೇಶ ಬ. ಮುಂಡಾಸ<br>ಆಣೆಕಟ್ಟು ವಿಭಾಗ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಆಲಮಟ್ಟಿ | ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು (ಕೆ.ಎಂ.ಎಫ್.) |
| **ಸಹಾಯಕ ಅಭಿಯಂತರರು (ವಿಭಾಗ-1)** | | |
| 04 | ಶ್ರೀ. ಹೆಚ್. ವಿಶ್ವನಾಥ್<br>(ಇವರ ಸೇವೆಯನ್ನು ಅವರ ಮಾತೃ ಸಂಸ್ಥೆಗೆ ಹಿಂದಿರುಗಿಸಲಾಗಿದೆ) | ಭಾರತೀಯ ಜನಸಂಖ್ಯಾ ಯೋಜನೆ |

(9) ಈ ಮೇಲೆ ತಿಳಿಸಿದ 04 ಅಭಿಯಂತರರುಗಳು ಸಾರ್ವಜನಿಕ ವಲಯಗಳ ಸಂಸ್ಥೆಗಳಲ್ಲಿ ನೇಮಕಗೊಂಡು ಒಪ್ಪಂದದ ಆಧಾರದ ಮೇಲೆ ಜಲಸಂಪನ್ಮೂಲ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ/ತ್ತಿರುವ ಇವರುಗಳು ವಿವಿಧ ಕಾಯ್ದೆಗಳಡಿ ಸ್ಥಾಪಿತವಾಗಿರುವ ಸಾರ್ವಜನಿಕ ವಲಯ/ ಉದ್ದಿಮೆಗಳ ನೌಕರರಾಗಿದ್ದು ಕರ್ನಾಟಕ ರಾಜ್ಯ ನಾಗರಿಕ ಸೇವೆಗಳಿಗೆ ಸೇರಿರುವ ನೌಕರರಾಗಿರುವುದಿಲ್ಲ.

(10) ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 ರ ಕಲಂ 2(3) ರಲ್ಲಿ ನಾಗರಿಕ ಸೇವೆಗಳು ಎಂದರೆ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿರುತ್ತದೆ:

*"Public Service" means a civil service of the State and includes a civil post under the State, the Secretarial staff of the Houses of the Legislature and the officers or servants of the High Court;*

(11) ಸದರಿ ಅಧಿನಿಯಮದಲ್ಲಿ ವ್ಯಾಖ್ಯಾನಿಸಿರುವ ರಾಜ್ಯ ಸಿವಿಲ್ ಸೇವೆಗಳಲ್ಲಿ ಸಾರ್ವಜನಿಕ ವಲಯದ ಸಂಸ್ಥೆ / ಉದ್ದಿಮೆಗಳ ಸೇವೆಗಳು ಒಳಗೊಂಡಿರುವುದಿಲ್ಲ. ಆದುದರಿಂದ ಸಾರ್ವಜನಿಕ ವಲಯಗಳಿಂದ ನೇಮಕಗೊಂಡ ನೌಕರರು ಕರ್ನಾಟಕ ನಾಗರಿಕ ಸೇವೆಗೆ ಸೇರ್ಪಡೆಗೊಳ್ಳಲು / ವಿಲೀನ ಹೊಂದಲು ಅರ್ಹರಿರುವುದಿಲ್ಲ.

(12) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರ ಸೇವೆಗಳನ್ನು ಸಾರ್ವಜನಿಕ ಸೇವೆಗೆ ವಿಲೀನಗೊಳಿಸುವುದಕ್ಕೆ ನಿಷೇಧ) ಅಧಿನಿಯಮ, 2020 ರ ಕಲಂ (3)(1) ರಲ್ಲಿ ಈ ಕೆಳಕಂಡಂತೆ ವ್ಯಾಖ್ಯಾನಿಸಲಾಗಿರುತ್ತದೆ:

**ಕಲಂ 3**.- ರಾಜ್ಯ ಸಿವಿಲ್ ಸೇವೆಯಲ್ಲಿ ವಿಲೀನಗೊಳಿಸುವಿಕೆಗೆ ನಿಷೇಧ:- (1) ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಯಾವುದೇ ಇತರ ಪ್ರಾಧಿಕಾರದ ಯಾವುದೇ ಕಾನೂನು ಕರಾರು ಅಥವಾ ಒಪ್ಪಂದ ಅಥವಾ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಸರ್ಕಾರದ ಯಾವೊಬ್ಬ ಇತರ ಅಧಿಕಾರಿಯ ಯಾವುದೇ ಆದೇಶದಲ್ಲಿ ಅಥವಾ ವ್ಯವಹರಣೆಗಳಲ್ಲಿ ಏನೇ ಒಳಗೊಂಡಿದ್ದರೂ, ಸಾರ್ವಜನಿಕ ವಲಯದ ಸಂಸ್ಥೆಯಲ್ಲಿನ ಯಾವೊಬ್ಬ ನೌಕರನು, ಸಾರ್ವಜನಿಕ ವಲಯದಲ್ಲಿನ ಅಂಥ ಸಂಸ್ಥೆಯನ್ನು ಮುಚ್ಚಲಾಗಿದೆ ಅಥವಾ ಮುಚ್ಚುವ ಸಂಭವವಿದೆ ಅಥವಾ ನೌಕರನು ನಿಯೋಜನೆಯ ಮೇರೆಗೆ ಅಥವಾ ಕರಾರಿನ ಮೇರೆಗೆ ಅಥವಾ ಕಛೇರಿ ಕರ್ತವ್ಯದ ಮೇರೆಗೆ ಯಾವುದೇ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾನೆ ಅಥವಾ ಕಾರ್ಯನಿರ್ವಹಿಸುತ್ತಿದ್ದಾನೆ ಎಂಬುದನ್ನು ಒಳಗೊಂಡಂತೆ ಇತರ ಯಾವುದೇ ಆಧಾರದ ಮೇರೆಗೆ ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಸಿವಿಲ್ ಸೇವೆಯಲ್ಲಿ ವಿಲೀನಗೊಳ್ಳುವುದಕ್ಕೆ ಅರ್ಹನಾಗತಕ್ಕದ್ದಲ್ಲ ಮತ್ತು ಅದಕ್ಕನುಸಾರವಾಗಿ,-

*(i)* *ಸರ್ಕಾರದ ಅಥವಾ ಯಾವುದೇ ವ್ಯಕ್ತಿ ಅಥವಾ ಯಾವುದಾದರೂ ಇತರ ಪ್ರಾಧಿಕಾರದ ವಿರುದ್ಧ ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರ ಪ್ರಾಧಿಕಾರದಲ್ಲಿ ಸಾರ್ವಜನಿಕ ಸೇವೆಯಲ್ಲಿ ಅಂಥ ವಿಲೀನಗೊಳಿಸುವಿಕೆಗಾಗಿ ಯಾವುದೇ ದಾವೆ ಅಥವಾ ಇತರ ವ್ಯವಹರಣೆಯನ್ನು ಹೂಡತಕ್ಕದ್ದಲ್ಲ, ನಿರ್ವಹಿಸತಕ್ಕದ್ದಲ್ಲ ಅಥವಾ ಮುಂದುವರಿಸತಕ್ಕದ್ದಲ್ಲ ಮತ್ತು*

*(ii)* *ಸಾರ್ವಜನಿಕ ಸೇವೆಯಲ್ಲಿ ಅಂಥ ವಿಲೀನಗೊಳಿಸುವಿಕೆಯನ್ನು ನಿರ್ದೇಶಿಸುವ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಯಾವುದೇ ನ್ಯಾಯಾಲಯವು ಜಾರಿಗೊಳಿಸತಕ್ಕದ್ದಲ್ಲ.*

(13) ಮೇಲ್ಕಂಡ ಕಾಯ್ದೆಗಳು ಹಾಗೂ ನಿಯಮಾವಳಿಗಳನ್ವಯ ಜಲಸಂಪನ್ಮೂಲ ಇಲಾಖೆಯ ಸೇವೆಗೆ ವಿಲೀನಗೊಳ್ಳಲು ಅಭಿಮತ ವ್ಯಕ್ತಪಡಿಸಿರುವ ಕಂಡಿಕೆ 08 ರಲ್ಲಿ ತಿಳಿಸಿರುವ ಸಾರ್ವಜನಿಕ ವಲಯದ ಸಂಸ್ಥೆ / ಉದ್ದಿಮೆಯ 04 ಅಭಿಯಂತರರುಗಳು ಜಲಸಂಪನ್ಮೂಲ ಇಲಾಖೆಯಲ್ಲಾಗಲಿ ಅಥವಾ ಯಾವುದೇ ಸರ್ಕಾರಿ ಇಲಾಖೆಗಳ ಸೇವೆಯಲ್ಲಾಗಲಿ ವಿಲೀನಗೊಳ್ಳಲು ಅರ್ಹರಿರುವುದಿಲ್ಲ.

(14) ಈ ನಡುವೆ ಮೇಲೆ (8) ರಲ್ಲಿ ಓದಲಾದ ದಿನಾಂಕ: 06-07-2021 ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 16(ಎ)(ii) ಗೆ ತಿದ್ದುಪಡಿ ತಂದಿದ್ದು, ಸದರಿ ತಿದ್ದುಪಡಿಯನ್ವಯ ಒಂದು ಇಲಾಖೆ / ಸಂಸ್ಥೆಯ ಅಧಿಕಾರಿ / ನೌಕರರನ್ನು ಮತ್ತೊಂದು ಇಲಾಖೆಯ ಸೇವೆಯಲ್ಲಿ ಶಾಶ್ವತವಾಗಿ ವರ್ಗಾವಣೆ ಮೂಲಕ ವಿಲೀನಗೊಳಿಸುವ ಅವಕಾಶವನ್ನು ತೆಗೆದು ಹಾಕಲಾಗಿದೆ. ಆದ್ದರಿಂದ ಈ ನಿಯಮಗಳನ್ವಯವೂ ಸಹ ವಿಲೀನಾತಿಗೆ ಆಸ್ಪದವಿಲ್ಲ.

(15) ಜಲಸಂಪನ್ಮೂಲ ಇಲಾಖೆಯು ಮೂಲತಃ ತಾಂತ್ರಿಕ ಇಲಾಖೆಯಾಗಿದ್ದು ಇಲ್ಲಿ ಕೆಲಸ ನಿರ್ವಹಿಸುವ ಅಭಿಯಂತರರು ತಾಂತ್ರಿಕ ಪದವಿ ಜೊತೆಗೆ ನೀರು ನಿರ್ವಹಣೆ ಹಾಗೂ ನೀರಾವರಿ ಯೋಜನೆಗಳಲ್ಲಿ ಪರಿಣತಿ ಹೊಂದಿರಬೇಕಾಗಿರುತ್ತದೆ. ಜಲಸಂಪನ್ಮೂಲ ಇಲಾಖೆಯಲ್ಲಿ ಕೇವಲ ನಿರ್ಮಾಣ ಚಟುವಟಿಕೆಗಳಷ್ಟೇ ಅಲ್ಲದೆ, ಜಲವಿಜ್ಞಾನ ಹಾಗೂ ಜಲಾನಯನ ಪ್ರದೇಶವನ್ನಾಧರಿಸಿ ನೀರಿನ ಲಭ್ಯತೆಯ ಲೆಕ್ಕಾಚಾರ, ಕಾಲುವೆ ಅಲೈನ್‌ಮೆಂಟ್ ಮತ್ತು ಒಳಪಡುವ ಅಚ್ಚುಕಟ್ಟು ಪ್ರದೇಶ ಗುರುತಿಸುವಿಕೆ, ಜಲವಿಜ್ಞಾನ ಆಧರಿತ ಕಾಲುವೆ ಹಾಗೂ ಸಂಬಂಧಿಸಿದ ಕಾಮಗಾರಿಗಳ ವಿನ್ಯಾಸ, ನಿರ್ಮಾಣ, ಏತ ನೀರಾವರಿ ಯೋಜನೆಗಳ ವಿನ್ಯಾಸ ಹಾಗೂ ನಿರ್ಮಾಣ, ಹನಿ ಮತ್ತು ತುಂತುರು ನೀರಾವರಿ ಪದ್ಧತಿ, ಬೆಳೆಗಳಿಗೆ ನೀರಿನ ಅವಶ್ಯಕತೆ, ನೀರಾವರಿ ವೇಳಾಪಟ್ಟಿ, ಕಾಲುವೆ ಜಾಲಗಳಲ್ಲಿ ನೀರಿನ ನಿರ್ವಹಣೆ, ಅಣೆಕಟ್ಟು ಹಾಗೂ ಕಾಲುವೆಗಳಲ್ಲಿ ಹೈಡ್ರಾಲಿಕ್ ವೈಫಲ್ಯಗಳ ಪರಿಣಾಮ, ಹವಾಮಾನವನ್ನಾಧರಿಸಿ ನೀರಿನ ನಿರ್ವಹಣೆಯಲ್ಲಿ ಅಳವಡಿಸಿಕೊಳ್ಳಬೇಕಾದ

ಬದಲಾವಣೆಗಳು, ಮುಂತಾದ ವಿಷಯಗಳ ಬಗ್ಗೆ ಇಲ್ಲಿನ ಅಭಿಯಂತರರು ತಾಂತ್ರಿಕ ಪರಿಣಿತರಿಂದ ತರಬೇತಿ ಪಡೆಯುವುದರೊಂದಿಗೆ ಕಾರ್ಯ ನಿರ್ವಹಣೆಯ ಜೊತೆಗೆ on-hand training ಪಡೆದು ಅವಶ್ಯಕ ಜ್ಞಾನವನ್ನು ಪಡೆದುಕೊಂಡಿರುತ್ತಾರೆ.

(16) ಮೇಲೆ ತಿಳಿಸಿರುವ ಅಂಶಗಳಲ್ಲದೆ, ಸಿವಿಲ್ ಸೇವಾ ನೌಕರರಾದ ಅಭಿಯಂತರರುಗಳು Accounts Higher, PWD Higher (Part-I), PWD Higher (Part-II), General Law (Part–I) and General Law (Part–II) ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ. ಈ ಇಲಾಖಾ ಪರೀಕ್ಷೆಗಳು ಇಲಾಖೆಯ ಅಭಿಯಂತರರುಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಅತ್ಯಾವಶ್ಯಕವಾಗಿರುತ್ತದೆ. ಸಾರ್ವಜನಿಕ ವಲಯಗಳ ಸಂಸ್ಥೆಗಳಲ್ಲಿ ನೇಮಕಗೊಂಡ ಅಧಿಕಾರಿ / ನೌಕರರು ಈ ಇಲಾಖಾ ಪರೀಕ್ಷೆಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಅಂತಹ ನೌಕರರ/ ಅಧಿಕಾರಿಗಳಿಗೆ ಇಂತಹ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುವುದಿಲ್ಲ ಅಥವಾ ಉತ್ತೀರ್ಣರಾಗಿರುವುದಿಲ್ಲ.

(17) ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಅಂಶಗಳ ಆಧಾರದ ಮೇಲೆ ಜಲಸಂಪನ್ಮೂಲ ಇಲಾಖೆಯಲ್ಲಿ ನಿಯೋಜನೆ / ಒಪ್ಪಂದದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದ / ತ್ತಿರುವ ಸಾರ್ವಜನಿಕ ವಲಯದ ಸಂಸ್ಥೆ / ಉದ್ದಿಮೆಗಳ 04 ಅಭಿಯಂತರರುಗಳು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತವಾಗಿ ವಿಲೀನಗೊಳ್ಳಲು ವ್ಯಕ್ತಪಡಿಸಿರುವ ಅಭಿಮತವನ್ನು ತಿರಸ್ಕರಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಜಸಂಇ 06 ಸೇಎಸು 2015 (1),</u>**
**<u>ಬೆಂಗಳೂರು ದಿನಾಂಕ: 28-10-2021</u>**

(18) ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಪ್ರಮುಖವಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಸಾರ್ವಜನಿಕ ವಲಯದ ಸಂಸ್ಥೆಗಳ ನೌಕರರ ಸೇವೆಗಳನ್ನು ಸಾರ್ವಜನಿಕ ಸೇವೆಗೆ ವಿಲೀನಗೊಳಿಸುವುದಕ್ಕೆ ನಿಷೇಧ) ಅಧಿನಿಯಮ, 2020 ರ ಕಲಂ (3)(1) ಮತ್ತು ಕರ್ನಾಟಕ ರಾಜ್ಯ ನಾಗರಿಕ ಸೇವಾ ಅಧಿನಿಯಮ, 1978 ರ ಕಲಂ 2(3) ರ ಪ್ರಕಾರ ಜಲಸಂಪನ್ಮೂಲ ಇಲಾಖೆಯಲ್ಲಿ ಒಪ್ಪಂದ / ನಿಯೋಜನ ಮೇಲೆ ಕೆಲಸ ನಿರ್ವಹಿಸುತ್ತಿದ್ದ / ತ್ತಿರುವ ಈ ಕೆಳಕಂಡ ಸಾರ್ವಜನಿಕ ವಲಯಗಳ ಸಂಸ್ಥೆಗಳ ಅಭಿಯಂತರರುಗಳು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ಶಾಶ್ವತವಾಗಿ ವಿಲೀನವಾಗಲು ಅವಕಾಶವಿಲ್ಲದೆ ಇರುವುದರಿಂದ ಅವರುಗಳು ಜಲಸಂಪನ್ಮೂಲ ಇಲಾಖೆಯ ಸೇವೆಯಲ್ಲಿ ವಿಲೀನಗೊಳ್ಳಲು ಆನ್‌ಲೈನ್ ಮುಖಾಂತರ ಸಲ್ಲಿಸಿರುವ ಅಭಿಮತವನ್ನು ತಿರಸ್ಕರಿಸಿ ಆದೇಶಿಸಿದೆ:

| ಕ್ರ ಸಂ | ಅಧಿಕಾರಿಯ ಹೆಸರು ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಮಾತೃ ಸಂಸ್ಥೆ |
|---|---|---|
| **<u>ಕಾರ್ಯಪಾಲಕ ಅಭಿಯಂತರರು</u>** | | |
| 01 | ಶ್ರೀ ಹೆಚ್. ಟಾಟಾ ಶಿವನ್ (ಅಧಿಸೂಚನೆ ಸಂಖ್ಯೆ: ಜಸಂಇ 13 ಸೇಎಸು 2021, ದಿನಾಂಕ: 22-09-2021ರಲ್ಲಿ ಇವರ ಸೇವೆಯನ್ನು ಅವರ ಮಾತೃ ಸಂಸ್ಥೆಗೆ ಹಿಂದಿರುಗಿಸಲಾಗಿದೆ) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು. (ಆರ್ಥಿಕ ಇಲಾಖೆ) |
| 02 | ಶ್ರೀ. ಆರ್. ಸುರೇಶ್ (ಅಧಿಸೂಚನೆ ಸಂಖ್ಯೆ: ಜಸಂಇ 50 ಸೇಎಸು 2019, ದಿನಾಂಕ: 07-03-2019ರಲ್ಲಿ ಇವರ ಸೇವೆಯನ್ನು ಅವರ ಮಾತೃ ಸಂಸ್ಥೆಗೆ ಹಿಂದಿರುಗಿಸಲಾಗಿದೆ) | ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಬೆಂಗಳೂರು. (ಆರ್ಥಿಕ ಇಲಾಖೆ) |

| | | |
|---|---|---|
| 03 | ಶ್ರೀ. ಸಂಗಮೇಶ ಬ. ಮುಂಡಾಸ<br>ಆಣೆಕಟ್ಟು ವಿಭಾಗ, ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ, ಆಲಮಟ್ಟಿ | ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ, ಬೆಂಗಳೂರು (ಕೆ.ಎಂ.ಎಫ್.) |
| **ಸಹಾಯಕ ಅಭಿಯಂತರರು (ವಿಭಾಗ-1)** | | |
| 04 | ಶ್ರೀ. ಹೆಚ್. ವಿಶ್ವನಾಥ್<br>(ಇವರ ಸೇವೆಯನ್ನು ಅವರ ಮಾತೃ ಸಂಸ್ಥೆಗೆ ಹಿಂದಿರುಗಿಸಲಾಗಿದೆ) | ಭಾರತೀಯ ಜನಸಂಖ್ಯಾ ಯೋಜನೆ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಹೆಚ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸೇವೆಗಳು-ಎ).